# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–2925/2013/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 10/04/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಗುರುರಾಜಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (2) ಶ್ರೀ.ರಾಜಣ್ಣ, ಅಧ್ಯಕ್ಷರು, ಮತ್ತು (3) ಶ್ರೀಮತಿ.ಲತಾ, ಕಂಪ್ಯೂಟರ್ ಆಪರೇಟರ್, ಇಂಗಳದಾಳ್ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಎಂ.ಟಿ.ರಾಘವೇಂದ್ರ ನಾಯಕ್ ಬಿನ್ ಎಂ.ಕೆ.ತಿಮ್ಮಯ್ಯ, ಗ್ರಾಮ ಪಂಚಾಯಿತಿ ಸದಸ್ಯರು, ಕುಂಚಿಗನಾಳ್, ಇಂಗಳದಾಳ್ ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ಗುರುರಾಜಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (2) ಶ್ರೀ.ರಾಜಣ್ಣ, ಅಧ್ಯಕ್ಷರು, ಮತ್ತು (3) ಶ್ರೀಮತಿ.ಲತಾ, ಕಂಪ್ಯೂಟರ್ ಆಪರೇಟರ್, ಇಂಗಳದಾಳ್ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ಚಿತ್ರದುರ್ಗ ತಾಲ್ಲೂಕು, ಇಂಗಳದಾಳ್ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವುದೇ ಕೆಲಸವನ್ನು ಮಾಡದೆ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಎದುರುದಾರರು ಕೂಲಿಕಾರರ ಹಣವನ್ನು ಕಂಪ್ಯೂಟರ್ ಆಪರೇಟರ್ ಆದ ಲತಾ ರವರ ಖಾತೆಗೆ ಜಮಾ ಮಾಡಿಕೊಂಡು ಬಂದಿರುತ್ತಾರೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಆಪಾದಿಸಿ ದೂರುದಾರರು ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ಅವರು ತಮ್ಮ ವರದಿಯಲ್ಲಿ ಸಹಾಯಕ ನಿರ್ದೇಶಕರು (ಗ್ರಾ ಉ) ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಇವರನ್ನು ತನಿಖೆಗೆ ನಿಯೋಜಿಸಿ ವರದಿಯನ್ನು ಪಡೆಯಲಾಗಿ, ಕುಮಾರಿ.ಲತಾ, ಕಂಪ್ಯೂಟರ್ ಆಪರೇಟರ್,

ಇಂಗಳದಾಳ್ ಗ್ರಾಮ ಪಂಚಾಯಿತಿ, ಇವರು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಯ ಬಾಬ್ತು ಪ್ರಗತಿ ಗ್ರಾಮೀಣ ಬ್ಯಾಂಕ್ ಚಿತ್ರದುರ್ಗದಲ್ಲಿ ಅವರ ಸ್ವಂತ ಖಾತೆಗೆ ಒಟ್ಟು ರೂ.18,600/- ಜಮಾ ಆಗಿರುವುದು ಕಂಡುಬರುತ್ತದೆ. ಇದರಿಂದಾಗಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಧಿನಿಯಮ 2005 ರ ನಿಯಮವನ್ನು ಉಲ್ಲಂಘಿಸಿ ಗ್ರಾಮಪಂಚಾಯಿತಿಯ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಹಣ ಪಾವತಿಸಿರುವುದು ಕಂಡುಬಂದಿರುತ್ತದೆ. ನಂತರದಲ್ಲಿ ಕುಮಾರಿ.ಲತಾ ಇವರು ದಿ.25/11/13 ರಂದು ರೂ.9,300/-, ದಿ.28/11/13 ರಂದು ರೂ.5,580/- ಹಾಗೂ ದಿ.11/10/13 ರಂದು ರೂ.3,720/- ಒಟ್ಟು ರೂ.18,600/- ನ್ನು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಈ ಬಗ್ಗೆ ಓಂಬಡ್ಸ್‌ಮನ್ ಜಿಲ್ಲಾಪಂಚಾಯತ್ ಇವರು ದಿ.4/12/13 ರಂದು ವಿಚಾರಣೆ ನಡೆಸಿ ಕುಮಾರಿ.ಲತಾ ಇವರು ಎನ್.ಆರ್.ಇ.ಜಿ. ನಿಧಿಗೆ ಹಣ ಜಮಾ ಮಾಡಿರುವುದರಿಂದ ಅವರ ಮೇಲಿನ ಶಿಸ್ತು ಕ್ರಮವನ್ನು ಕೈಬಿಟ್ಟಿದ್ದು, ಆ ನೌಕರರು ಹೊರ ಮೂಲ ಸಂಸ್ಥೆಯ ನೌಕರರಾಗಿರುವುದರಿಂದ ಇನ್ನುಮುಂದೆ ಯಾವುದೇ ಗ್ರಾಮಪಂಚಾಯಿತಿಗಳಲ್ಲಿ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಪರಿಗಣಿಸಬಾರದೆಂದು ಆದೇಶಿಸಿರುತ್ತಾರೆ ಹಾಗೂ ಶ್ರೀ.ಗುರುರಾಜಪ್ಪ ಗ್ರಾಮಪಂಚಾಯಿತಿ ಕಾರ್ಯದರ್ಶಿ ಪ್ರಭಾರ ಪಿ.ಡಿ.ಓ. ಇವರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇಲಾಖಾ ವಿಚಾರಣೆ ನಡೆಸಿ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕೆಂದು ಆದೇಶಿಸಿರುತ್ತಾರೆಂದು ವರದಿಯನ್ನು ನೀಡಿರುತ್ತಾರೆ.

4) ನಂತರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಇವರು ದಿ.28/6/2-13 ರಂದು ಶ್ರೀಮತಿ.ಬಿ.ಲತಾ ಕಂಪ್ಯೂಟರ್ ಆಪರೇಟರ್, ಇಂಗಳದಾಳ್ ಗ್ರಾಮಪಂಚಾಯಿತಿ ಇವರನ್ನು ಕಂಪ್ಯೂಟರ್ ಆಪರೇಟರ್ ಹುದ್ದೆಯಿಂದ ತೆಗೆದುಹಾಕಲು ಪಂಚಾಯಿತಿಯಲ್ಲಿ ತೀರ್ಮಾನಿಸಿ ಅದರಂತೆ ಕೆಲಸದಿಂದ ಶ್ರೀಮತಿ.ಬಿ.ಲತಾ ಕಂಪ್ಯೂಟರ್ ಆಪರೇಟರನ್ನು ತೆಗೆದುಹಾಕಿರುತ್ತಾರೆಂದು ವರದಿ ನೀಡಿದ್ದು, ಆ ಬಗ್ಗೆ ಇಂಗಳದಾಳ್ ಗ್ರಾಮಪಂಚಾಯಿತಿಯವರು ಮಾಡಿರುವ ನಡವಳಿಯ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ.

5) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಚಿತ್ರದುರ್ಗ, ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀ.ಗುರುರಾಜಪ್ಪ, ಗ್ರಾಮಪಂಚಾಯಿತಿ ಕಾರ್ಯದರ್ಶಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕ್ರಿ, ಇಂಗಳದಾಳ್ ಗ್ರಾಮಪಂಚಾಯಿತಿ, ಇವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ವಯ ಅವರಿಗೆ ಪ್ರಸಕ್ತ ವರ್ಷದಲ್ಲಿ ಬಿಡುಗಡೆಯಾಗಬೇಕಾಗಿದ್ದ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯಲು ಆದೇಶಿಸಿರುತ್ತಾರೆಂದು ವರದಿಯನ್ನು ನೀಡಿದ್ದು, ವರದಿಯ ಜೊತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶಿಸ್ತು ಪ್ರಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರು ದಿ.29/12/15 ರಂದು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ.

6) ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾ ರಹಿತವಾಗಿ ತಡೆಹಿಡಿಯಲು ಆದೇಶಿಸಿರುವುದು ಕಂಡುಬರುತ್ತದೆ. ಆದರೆ 2 ಮತ್ತು 3ನೇ ಎದುರುದಾರರ ವಿರುದ್ಧ ಯಾವುದೇ ಶಿಸ್ತು ಕ್ರಮವನ್ನು ಕೈಗೊಂಡಿರುವುದು ಕಂಡುಬಂದಿರುವುದಿಲ್ಲ.

7) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ 3ನೇ ಎದುರುದಾರರು ಹಣವನ್ನು ದುರುಪಯೋಗ ಪಡಿಸುವಲ್ಲಿ ಪಾತ್ರ ವಹಿಸಿದ್ದಾರೆಂದು ವರದಿಯಲ್ಲಿ ಕಂಡುಬರುತ್ತಿದ್ದು, ಸದರಿಯವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ಹೂಡಬಹುದಾಗಿದ್ದು, ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ಮತ್ತು 2ನೇ ಎದುರುದಾರರು ಅಕ್ರಮದಲ್ಲಿ ಭಾಗಿಯಾಗಿದ್ದರೆ ಅವರ ವಿರುದ್ಧ ಪಂಚಾಯತ್ ರಾಜ್ ಅಧಿನಿಯಮ ಕಲಂ 43ಎ ರನ್ವಯ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 11-4-17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
**ಉಪಲೋಕಾಯುಕ್ತರು-2,**
ಕರ್ನಾಟಕ ರಾಜ್ಯ, ಬೆಂಗಳೂರು.